20-3-25

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಪಿ.ಸುಜಾ ಕುಶಾಲಪ್ಪ ಇವರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ:-**

**ಪ್ರಶ್ನೆ:**

ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಸ್ತಾಪಿಸಿರುವಂತೆ, ಕೊಡಗು ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಶೂನ್ಯ ದಾಖಲಾತಿ ಹೊಂದಿದ್ದ 21 ಸರ್ಕಾರಿ ಶಾಲೆಗಳಿಗೆ ಸದ್ದಿಲ್ಲದೇ ಬೀಗ ಬಿದ್ದಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿಯೂ ಇದು ಮುಂದುವರೆಯುವ ಸಾಧ್ಯತೆ ಹೆಚ್ಚಿದೆ. 2019 ರಿಂದ 2024ರವರೆಗೆ ಮೂಲ ಸೌಕರ್ಯಗಳ ಕೊರತೆ ಸೇರಿದಂತೆ ಶೂನ್ಯ ದಾಖಲಾತಿ ಹೊಂದಿರುವ ಬರೋಬ್ಬರಿ 21 ಶಾಲೆಗಳಿಗೆ ಸರ್ಕಾರದ ಆದೇಶದಂತೆ ಬೀಗ ಬಿದ್ದಿರುವುದು ಶೋಚನೀಯ ಸಂಗತಿ. ಶೂನ್ಯ ದಾಖಲಾತಿಗೆ ಮುಖ್ಯ ಕಾರಣ, ಸದರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ. ಮತ್ತು ಸರ್ಕಾರಿ ಶಾಲೆಗಳ ಅವ್ಯವಸ್ಥೆ. ಇದರಿಂದ ಸರ್ಕಾರಿ ಶಾಲೆಗಳ ಬೆಳವಣಿಗೆಯು ಗಣನೀಯವಾಗಿ ಕುಸಿತ ಕಾಣುತ್ತಿದ್ದು, ಇದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಸರ್ಕಾರದ ಆದೇಶದಂತೆ ಈಗಾಗಲೇ ಮುಚ್ಚಿರುವ ಶಾಲೆಗಳ ವಿದ್ಯಾರ್ಥಿಗಳು ಬೇರೆಡೆ ಶಾಲೆಗಳಿಗೆ ತೆರಳುತ್ತಿದ್ದಾರೆ. ಹೀಗಾದಾಗ ಸರ್ಕಾರಿ ಶಾಲೆಗಳ ಗುಣಮಟ್ಟ ಕಡಿಮೆ ಆದಂತೆ ಆಗುತ್ತದೆ. ಇದು ಕೇವಲ ಮಡಿಕೇರಿ ಜಿಲ್ಲೆಯ ಸಮಸ್ಯೆ ಮಾತ್ರ ಅಲ್ಲ, ಕರ್ನಾಟಕ ರಾಜ್ಯದ ಹಲವೇಡೆ, ಸರ್ಕಾರಿ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸಲು ಹಿಂದೇಟು ಹಾಕಿ, ಬೇರೆಡೆಗೆ ಸೇರಿಸುತ್ತಿರುವುದು ನಿಜಕ್ಕೂ ದುಃಖಕರ ಸಂಗತಿ. ಅಲ್ಲಿ ಇಲ್ಲಿ ಎಲ್ಲೋ ಸರ್ಕಾರಿ ಶಾಲೆಗಳನ್ನು ಅವಲಂಬಿಸಿದ್ದ ಅದೆಷ್ಟೋ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಹಿನ್ನಡೆಯಾಗಿದೆ. ಇದ್ದ ಶಾಲೆಯನ್ನು ಕಳೆದುಕೊಂಡ ವಿದ್ಯಾರ್ಥಿಗಳು ಪಕ್ಕದ ಊರಿನ ಶಾಲೆಗಳಿಗೆ ತೆರಳಬೇಕಾದ ಅನಿವಾರ್ಯತೆ ನಿರ್ಮಾಣವಾಗಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಮಡಿಕೇರಿ ತಾಲ್ಲೂಕಿನಲ್ಲಿ 6, ಸೋಮವಾರಪೇಟೆ ತಾಲ್ಲೂಕಿನಲ್ಲಿ 12 ಹಾಗೂ ವಿರಾಜಪೇಟೆ ತಾಲ್ಲೂಕಿನಲ್ಲಿ 3 ಸರ್ಕಾರಿ ಶಾಲೆಗಳನ್ನು ಯಾವುದೇ ವಿದ್ಯಾರ್ಥಿಗಳು ದಾಖಲಾಗದ ಕಾರಣ ಮುಚ್ಚಲಾಗಿದೆ. 2019 ರಲ್ಲಿ 2, 2022ರಲ್ಲಿ 9, 2023ರಲ್ಲಿ 4, ಹಾಗೂ 2024ರಲ್ಲಿ 6 ಶೂನ್ಯ ದಾಖಲಾತಿ ಹೊಂದಿರುವ ಸರ್ಕಾರಿ ಶಾಲೆಗಳಿಗೆ ಬೀಗ ಬಿದ್ದಿದೆ. ಆದ್ದರಿಂದ, ಮುಂಬರುವ ದಿನಗಳಲ್ಲಿ **ಕೊಡಗು ಜಿಲ್ಲೆ ಮತ್ತು ಇಡೀ ರಾಜ್ಯದಲ್ಲಿ ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಸುಧಾರಿಸಿ,** ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸುವ ಸಂಬಂಧ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಬಳಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಕೊಡಗು ಜಿಲ್ಲೆಯಲ್ಲಿ 2019 ರಿಂದ 2024 ರವರೆಗೆ 21 ಶಾಲೆಗಳು ಶೂನ್ಯ ದಾಖಲಾತಿ ಕಾರಣದಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತವೆ. (ಶಾಲೆಗಳ ಪಟ್ಟಿಯನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ) ಈ 21 ಶಾಲೆಗಳು ಮೂಲಭೂತ ಸೌಕರ್ಯಗಳನ್ನು ಹೊಂದಿರುತ್ತವೆ..

ಈ ಶಾಲೆಗಳು ಕಾಡಿನ ಅಂಚಿನ ಹಾಡಿ ಮತ್ತು ಲೈನ್ ಮನೆಗಳಿಗೆ ಸಮೀಪದಲ್ಲಿರುವ ಶಾಲೆಗಳಾಗಿದ್ದವು. ಇಲ್ಲಿ ತಾತ್ಕಾಲಿಕವಾಗಿ ನೆಲಸುವ ಕಾರ್ಮಿಕರು ವಲಸೆ ಹೋಗುವ

ಪ್ರವೃತ್ತಿಯವರಾಗಿರುವುದರಿಂದ ವಿದ್ಯಾರ್ಥಿಗಳ ದಾಖಲಾತಿ ಶೂನ್ಯವಾದ ಕಾರಣ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ. ಮತ್ತೆ ಇಂತಹ ಜನ ವಸತಿಗಳ ಪೋಷಕರಿಂದ ಬೇಡಿಕೆ ಬಂದಲ್ಲಿ ಪುನಃ ಶಾಲೆಯನ್ನು ಆರಂಭಿಸಲಾಗುವುದು.

ಉಳಿದಂತೆ ಕೊಡಗು ಜಿಲ್ಲೆಯಲ್ಲಿ ಶೂನ್ಯ ದಾಖಲಾತಿಯಿಂದ ಯಾವುದೇ ಸರ್ಕಾರಿ ಪ್ರೌಢ ಶಾಲೆಯನ್ನು ಮುಚ್ಚಿರುವುದಿಲ್ಲ.

**ಈ ಶಾಲೆಗಳು ಸೇರಿದಂತೆ ಸರ್ಕಾರಿ ಶಾಲೆಗಳ ಗುಣಮಟ್ಟದ ಸುಧಾರಣೆಗೆ ವಹಿಸಲಾಗಿರುವ ಕ್ರಮಗಳು ಈ ಕೆಳಕಂಡಂತಿವೆ.**

ಕಲಿಕಾ ಹಬ್ಬ, ಮೆಟ್ರಿಕ್ ಮೇಳ, FLN (Foundational Literacy and Numeracy) ಪೂರ್ಣಪ್ರಮಾಣದಲ್ಲಿ ಜಾರಿಗೆ ತರುವುದು, ಸ್ಪರ್ಧೆಗಳನ್ನು ಏರ್ಪಡಿಸುವುದು, ವಿದ್ಯಾ ಪ್ರವೇಶವನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. ಮಾಸಾಚರಣೆಗಳನ್ನು ವ್ಯವಸ್ಥಿತವಾಗಿ ಜಾರಿಗೆ ತರುವುದು. 2025-26ರ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಈ ಬಗ್ಗೆ ಮಾಹಿತಿ ನೀಡುವುದು, ನಿಯಮಿತ ಅನುಪಾಲನೆಗೆ ಕ್ರಮವಹಿಸಲಾಗುವುದು.

- ನಿಪುಣ್ ಭಾರತ್ ಅಡಿಯಲ್ಲಿ ಮಾರ್ಪಾಡು ಮಾಡಿರುವ FLNನ 17 ಕಲಿಕಾಫಲಗಳ ಬಗ್ಗೆ ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಿ ಜಿಲ್ಲಾ ಅನುಷ್ಠಾನ ಅಧಿಕಾರಿಗಳ ಮೂಲಕ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ FLN ಕಲಿಕಾ ಫಲಗಳನ್ನು ಅನುಷ್ಠಾನ ಮಾಡುವ ಹಾಗೂ ಅನುಪಾಲನೆ ಮಾಡುವ ಬಗ್ಗೆ ಸುತ್ತೋಲೆ ಮೂಲಕ ಮಾರ್ಗದರ್ಶನ ನೀಡಲು ಕ್ರಮವಹಿಸಲಾಗುವುದು.
- 2025-26ರ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ನಿಪುಣ್ ಭಾರತ್ ಅಡಿಯಲ್ಲಿ ಮಾರ್ಪಾಡು ಮಾಡಿರುವ 17 ಕಲಿಕಾ ಫಲಗಳನ್ನು ಅಳವಡಿಸಬೇಕಾಗಿದೆ. ಮಕ್ಕಳ ಪ್ರಗತಿ ಸಾಧನೆಯನ್ನು ಪ್ರತಿ ಮಾಹೆ ಡಯಟ್‌ಗಳ ಮೂಲಕ ಮಾಹಿತಿ ಪಡೆದು ಪರಿಶೀಲಿಸಿ ಮುಂದಿನ ಮಾಹೆಗಳಲ್ಲಿ ಕಲಿಕಾ ಫಲಗಳನ್ನು ಸಾಧಿಸದ ಮಕ್ಕಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಡಯಟ್‌ನ ನೋಡಲ್ ಅಧಿಕಾರಿಗಳಿಗೆ ಸಭೆಗಳ ಮೂಲಕ ಮತ್ತು ಆನ್ ಲೈನ್ ಮೂಲಕ ಮಾರ್ಗದರ್ಶನ ನೀಡಲಾಗುವುದು. ಕಲಿಕಾ ಫಲಗಳನ್ನು ಸಾಧನೆ ಮಾಡಿದ ಶಾಲೆಗಳು, ಕ್ಲಸ್ಟರ್‌ಗಳು ಮತ್ತು ಬ್ಲಾಕ್ ಗಳನ್ನು ಗುರುತಿಸಿ ಉತ್ತೇಜಿಸುವ ಕಾರ್ಯಕ್ರಮಗಳನ್ನು ಮುಂದಿನ ವರ್ಷಗಳಲ್ಲಿ ಹಮ್ಮಿಕೊಳ್ಳಲಾಗುವುದು. ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ FLN ಅನುಷ್ಠಾನ ಸಂಬಂಧ ಅಗತ್ಯವಿರುವ ಮಾರ್ಗದರ್ಶನವನ್ನು ಎಲ್ಲಾ ಡಯಟ್ಗಳ ಮೂಲಕ ಶಾಲೆಗಳಿಗೆ ಸುತ್ತೋಲೆಯ ಮುಖಾಂತರ ನೀಡಲಾಗುವುದು. FLN ಸಾಧನೆಯನ್ನು 2026-27ನೇ ಸಾಲಿಗೆ ಪೂರ್ಣ ಪ್ರಮಾಣದಲ್ಲಿ ಸಾಧನೆ ಮಾಡಲು ಗುರಿ ನಿಗಧಿಪಡಿಸಿಕೊಳ್ಳಲಾಗಿದೆ.
- 4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಬುನಾದಿ ಭಾಷಾ ಮತ್ತು ಗಣಿತ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಬೋಧನೆ ಎಂಬ ಬೋಧನಾ ವಿಧಾನವನ್ನು ಬಳಸಿಕೊಂಡು ಸರಳ ಮೌಲ್ಯಮಾಪನದ ಮೂಲಕ ಮಕ್ಕಳ ಕಲಿಕಾ ಮಟ್ಟ ಗುರುತಿಸಿಕೊಂಡು ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಮಕ್ಕಳ ಗುಂಪುಗಳನ್ನು ಮಾಡಿ ಸೂಕ್ತ

ಕಲಿಕಾ ಸಾಮಗ್ರಿಗಳನ್ನು ನೀಡಿ ಚಟುವಟಿಕೆಗಳನ್ನು ನಡೆಸಿ ಕಲಿಸಲು ಕ್ರಮ ಕೈಗೊಳ್ಳಲಾಗುವುದು. ರಾಜ್ಯದ 42 ಸಾವಿರ ಶಿಕ್ಷಕರಿಗೆ ತರಬೇತಿ ನೀಡಿ ಪ್ರತಿ ದಿನ ಭಾಷಾ ಮತ್ತು ಗಣಿತ ಕಲಿಕೆಗೆ ತಲಾ ಒಂದು ಅವಧಿಯನ್ನು ನಿಗದಿಪಡಿಸಿ 60 ದಿನಗಳ ಕಾಲ ಶಾಲಾ ವೇಳೆಯಲ್ಲಿ ಅನುಷ್ಠಾನಗೊಳಿಸಲಾಗುವುದು. ಕಾರ್ಯಕ್ರಮದ ಪ್ರಾರಂಭದಲ್ಲಿ Base line ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಗುರುತಿಸಿಕೊಂಡು 60 ದಿನಗಳ ನಂತರ Endline ಸಮೀಕ್ಷೆ ನಡೆಸಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉಂಟಾಗಿರುವ ಪ್ರಗತಿಯನ್ನು ತಂತ್ರಜ್ಞಾನವನ್ನು ಬಳಸಿ ವಿಶ್ಲೇಷಿಸಲಾಗುವುದು. ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯನ್ನು ತಿಳಿದುಕೊಳ್ಳಲು Dash Board ಅನ್ನು ಸಿದ್ಧಪಡಿಸಲಾಗುತ್ತಿದೆ.

- ಜುಲೈ 2025ರ ಮಾಹೆಯಿಂದ ಸರ್ಕಾರಿ ಶಾಲೆಗಳ 4 ಮತ್ತು 5ನೇ ತರಗತಿಯ ಶಿಕ್ಷಕರಿಗೆ ತರಬೇತಿಯನ್ನು ನೀಡಿ ಶಾಲಾ ವೇಳೆಯಲ್ಲಿ ಪೂರಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು (ಅಕ್ಷರ, ಪದ, ವಾಕ್ಯಗಳನ್ನು ನಿರರ್ಗಳವಾಗಿ ಓದುವ) ಉತ್ತಮಗೊಳಿಸಲು ಕ್ರಮವಹಿಸಲಾಗುತ್ತಿದೆ.
- ಗಣಿತ-ಗಣಕ:- ವಿನೂತನ ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿಯೂ ಸರ್ಕಾರದ ಆರ್ಥಿಕ ಬೆಂಬಲದೊಂದಿಗೆ ಮುಂದುವರೆಸಬಹುದಾಗಿದೆ. ಇದನ್ನು ರಾಜ್ಯಾದ್ಯಂತ ವಿಸ್ತರಿಸಿದಲ್ಲಿ ಮಕ್ಕಳ ಕಲಿಕಾ ಮಟ್ಟ ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. 2025-26 ನೇ ಸಾಲಿಗೆ PAB ಚಟುವಟಿಕೆಗಳಡಿ 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗೆ ತರಬೇತಿಗಾಗಿ ಅನುದಾನ ಬೇಡಿಕೆ ಸಲ್ಲಿಸಿದ್ದು, ಅನುದಾನ ಬಿಡುಗಡೆಯಾದ ನಂತರ ಅಗತ್ಯ ಕ್ರಮ ವಹಿಸಲಾಗುವುದು.
- 2025-26 ನೇ ಸಾಲಿನಲ್ಲಿ ಗಣಿತ ಕಲಿಕಾ ಆಂದೋಲನಾ ಕಿಟ್ 2.0 ಬಳಕೆಯನ್ನು ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಅನುಪಾಲನಾ ಅಧಿಕಾರಿಗಳಿಂದ ಅನುಪಾಲನೆ ಮಾಡಲಾಗುವುದು.
- ಪರಿಷ್ಕರಿಸಿದ ದ್ವಿಭಾಷಾ ನಿಘಂಟನ್ನು ಎಲ್ಲಾ ಸರ್ಕಾರಿ ಶಾಲೆಗಳಿಗೆ / ವಿದ್ಯಾರ್ಥಿಗಳಿಗೆ ವಿತರಿಸಿ ಶಿಕ್ಷಕರಿಗೆ ತರಬೇತಿ ನೀಡುವ ಮುಖಾಂತರ ದ್ವಿಭಾಷಾ ಚಿತ್ರಸಹಿತ ನಿಘಂಟಿನ ಬಳಕೆಯನ್ನು ಉತ್ತೇಜಿಸಲು ಕ್ರಮ ವಹಿಸಲಾಗುವುದು. Pilot ಮಾಡಲು ಆಯ್ಕೆ ಮಾಡಿಕೊಂಡ 100 ಶಾಲೆಗಳಲ್ಲಿ ಚಿತ್ರಸಹಿತ ನಿಘಂಟನ್ನು ಬಳಸುತ್ತಿರುವ ಬಗ್ಗೆ ಸೂಕ್ತ ಅನುಪಾಲನೆ ಮಾಡಲು ಕ್ರಮವಹಿಸಲಾಗುತ್ತಿದೆ.
- EMTIP/KPS/PMSHRI ಆದರ್ಶ ಶಾಲೆಗಳ ಸಂಖ್ಯೆಯನ್ನು ಹೆಚ್ಚು ಮಾಡುವುದು. 2024-25 ನೇ ಸಾಲಿನಲ್ಲಿ 6 ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ತರಗತಿಗಳು ನಡೆಯುತ್ತಿರುವ 1001 ಶಾಲೆಗಳಲ್ಲಿ 2025-26 ನೇ ಸಾಲಿನಲ್ಲಿ 7 ನೇ ತರಗತಿಯಲ್ಲಿ ಆಂಗ್ಲ ಮಾಧ್ಯಮ ಪ್ರಾರಂಭಿಸಲಾಗುವುದು. 2025-26 ನೇ ಸಾಲಿನಲ್ಲಿ ಆಲೂರು ವೆಂಕಟರಾವ್ ಭಾಷಾ ಕೌಶಲ್ಯ ಕೇಂದ್ರಗಳ ಮೂಲಕ ಕಥೆಗಳ ಮೂಲಕ ಭಾಷಾ ಬೆಳವಣಿಗೆ (Story based pedagogy) ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.
- ಎಲ್ಲಾ ಶಾಲೆಗಳಲ್ಲೂ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು ಅಥವಾ ಅಂಗನವಾಡಿಗಳ ಕಲಿಕೆಯನ್ನು ಶಾಲಾ ವ್ಯಾಪ್ತಿಗೆ ತರುವುದು. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ

ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯುವ ಮೂಲಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಉಳಿಯುವಿಕೆ ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡಲು ಅನುಕೂಲವಾಗುತ್ತದೆ. ಹಾಗೂ ಶಾಲೆಯಿಂದ ಹೊರ ಗುಳಿಯುವ ಮತ್ತು ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು

- 10 ಅಂಶದ ಕಾರ್ಯಕ್ರಮಗಳು :-

**ಚಟುವಟಿಕೆ (1)**– ಸೇತುಬಂಧ, **ಚಟುವಟಿಕೆ (2)**- ಶಾಲಾ ಶೈಕ್ಷಣಿಕ ಯೋಜನೆ, **ಚಟುವಟಿಕೆ (3)** - ಭಾಷಾ ಮಾಸಾಚರಣೆ, **ಚಟುವಟಿಕೆ (4)**- ಸ್ಪಷ್ಟ ಓದು, ಶುದ್ಧ ಬರಹ, ಸರಳ ಗಣಿತ, **ಚಟುವಟಿಕೆ (5)**- ವಿಷಯ ವೇದಿಕೆ, **ಚಟುವಟಿಕೆ (6)**- ವಾರದ ವಿಜ್ಞಾನ ಪ್ರಯೋಗ, **ಚಟುವಟಿಕೆ (7)**- ವಿಶೇಷ ಅವಧಿ ಹಾಗೂ ಸತತ ಪರಿಶ್ರಮ, **ಚಟುವಟಿಕೆ (8)**- ಸಹೋದ್ಯೋಗಿಗಳ ಅವಲೋಕನ ಪಾಠ, **ಚಟುವಟಿಕೆ (9)**- ಪುಸ್ತಕದ ಪರಿಚಯ ಹಾಗೂ **ಚಟುವಟಿಕೆ (10)**- ರಸ ಪ್ರಶ್ನೆ ಕಾರ್ಯಕ್ರಮ.

- 1 ನೇ ತರಗತಿಗೆ ಹೊಸದಾಗಿ ದಾಖಲಾಗುವ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾಪ್ರವೇಶ ಚಟುವಟಿಕೆಗಳ ಹಾಳೆಗಳನ್ನು ಕಲಿ-ನಲಿ ಪಠ್ಯ ಪುಸ್ತಕದಲ್ಲಿ (ಆಂಗ್ಲ, ಮರಾಠಿ, ತಮಿಳು, ತೆಲುಗು ಮಾಧ್ಯಮ) ಅಳವಡಿಸಲು ಕ್ರಮವಹಿಸಲಾಗುತ್ತಿದೆ.
- ಹಿಂದಿನ ಸಾಲಿನಂತೆ ಸೇತಬಂಧ ಕಾರ್ಯಕ್ರಮವನ್ನು ಮುಂದುವರೆಸುವ ಸಂಬಂಧ ಸುತ್ತೋಲೆ ಹೊರಡಿಸುವ ಮೂಲಕ ಮಾರ್ಗದರ್ಶನ ನೀಡಲಾಗುವುದು.
- ಕಲಿಕಾ ಚೇತರಿಕೆ, ಕಲಿಕಾ ಬಲವರ್ಧನೆ ಉಪಕ್ರಮಗಳಡಿಯಲ್ಲಿ ಸಿದ್ಧಪಡಿಸಿರುವ ಚಟುವಟಿಕೆ ಪುಸ್ತಕಗಳು, ಕಲಿಕಾಫಲಾಧಾರಿತ ಪ್ರಶ್ನೆಕೋಠಿ, ಅಭ್ಯಾಸ ಪುಸ್ತಕಗಳು, ನಿರಂತರ ಬಳಕೆಗೆ ಪೂರಕವಾಗಿದ್ದು, 2025-26 ನೇ ಸಾಲಿನಲ್ಲಿ ಇವುಗಳ ಬಳಕೆಯ ಬಗ್ಗೆ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಸುತ್ತೋಲೆ ಅಳವಡಿಸುವ ಮೂಲಕ ಸೂಕ್ತ ಮಾರ್ಗದರ್ಶನ ನೀಡಲಾಗುವುದು.
- 2025-26 ನೇ ಸಾಲಿನಿಂದ TALP ಸೌಲಭ್ಯ ಹೊಂದಿರುವ 2000 ಶಾಲೆಗಳಲ್ಲಿ, 4 ನೇ ತರಗತಿಯಿಂದ 10 ನೇ ತರಗತಿಗಳ ಅಂದಾಜು 2 ಲಕ್ಷ ವಿದ್ಯಾರ್ಥಿಗಳಿಗೆ ಕಲಿಕಾ ದೀಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.
- ಪ್ರತಿ ಶಾಲೆಗೆ 10 Microphone Headset & Internet ಸೌಲಭ್ಯ ಹಾಗೂ Server in SDC ಅಗತ್ಯವಿದ್ದು, ಈ ಸೌಲಭ್ಯಕ್ಕಾಗಿ ರೂ. 10.00 ಕೋಟಿಗಳ ಅನುದಾನವನ್ನು 2025-26 ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ಕೋರಲಾಗಿದೆ.
- ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ EKStep ಸಂಸ್ಥೆಯು ತಂತ್ರಾಂಶ ಅಭಿವೃದ್ಧಿ ಮತ್ತು Serverಗಾಗಿ ರೂ.46.00 ಕೋಟಿ ಅನುದಾನ ಭರಿಸುತ್ತಿದೆ.
- ಖಾನ್ ಅಕಾಡೆಮಿ ಸಹಯೋಗದೊಂದಿಗೆ ರಾಜ್ಯದ 6 ರಿಂದ 10 ನೇ ತರಗತಿಯ ಸರ್ಕಾರಿ ಶಾಲೆಗಳಲ್ಲಿ ಜ್ಞಾನ ಸೇತು ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

- ರಾಜ್ಯದ 6 ರಿಂದ 10 ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧನೆ ಮಾಡುತ್ತಿರುವ ಶಿಕ್ಷಕರಿಗೆ ಬೋಧನಾ ವಿಧಾನದಲ್ಲಿ ನಾವೀನ್ಯತೆ ಅಳವಡಿಸಿಕೊಳ್ಳಲು, ಕೃತಕ ಬುದ್ಧಿಮತ್ತೆ ಮತ್ತು ಶೈಕ್ಷಣಿಕ ತಂತ್ರಜ್ಞಾನದ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.
- ಕಂಪ್ಯೂಟರ್ ಸೌಲಭ್ಯವನ್ನು ಹೊಂದಿರುವ ರಾಜ್ಯದ 5000 ಸರ್ಕಾರಿ ಶಾಲೆಗಳಲ್ಲಿ 6 ರಿಂದ 10 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದಾರ್ಥಿಗಳಿಗೆ ಕೃತಕ ಬುದ್ದಿಮತ್ತೆ ಮತ್ತು ತಂತ್ರಜ್ಞಾನದ ಬಳಕೆಯಿಂದ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಪರಿಣಾಮಕಾರಿಯಾಗಿ ಕಲಿಯಲು ಅವಕಾಶ ಕಲ್ಪಿಸಲಾಗುವುದು.

- **ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳಕ್ಕೆ ವಹಿಸಲಾಗಿರುವ ಸರ್ಕಾರದ ಕ್ರಮಗಳು :**

1. ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಮಧ್ಯಾಹ್ನದ ಉಪಹಾರ ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.
2. ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.
3. ಗುಣಾತ್ಮಕ ಶಿಕ್ಷಣಕ್ಕಾಗಿ ನಿಯಮಿತವಾಗಿ ಶಿಕ್ಷಕರಿಗೆ ತರಬೇತಿ ಆಯೋಜಿಸಲಾಗುತ್ತದೆ.
4. ಸರ್ಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.
5. ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ಮತ್ತು ನ್ಯೂನ್ಯತೆಗನುಗುಣವಾಗಿ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.
6. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ ಯೋಗ, ಕರಾಟೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
7. ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಸಂಬಂಧಿಸಿದ ಪೋಷಕರು ಮತ್ತು ವಿದ್ಯಾರ್ಥಿಗಳನ್ನು ಮನವೊಲಿಸಿ, ಪುನ: ಶಾಲೆಗೆ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್ ಡಿಎಮ್‌ಸಿ, ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.
8. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡುಹಿಡಿಯಲಾಗುತ್ತಿದೆ.
9. ಶಾಲಾ ದತ್ತು ಯೋಜನೆ (ಸಿ.ಎಸ್.ಆರ್) ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸಲಾಗುತ್ತಿದೆ
10. 2023-24ನೇ ಸಾಲಿನಲ್ಲಿ ರಾಜ್ಯಾದ್ಯಂತ ಖಾಲಿ ಇರುವ ಹುದ್ದೆಗಳಿಗೆದುರಾಗಿ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲೆಗಳಿಗೆ 35000 ಅತಿಥಿ ಶಿಕ್ಷಕರನ್ನು ಮತ್ತು ಪ್ರೌಢಶಾಲೆಗಳಿಗೆ 7808 ಅತಿಥಿ ಶಿಕ್ಷರನ್ನು ನೇಮಿಸಿಕೊಂಡು ಮಕ್ಕಳ ಬೋಧನೆಗೆ ತೊಂದರೆಯಾಗದಂತೆ ನೇಮಿಸಿಕೊಂಡು ಮಕ್ಕಳ ಕಲಿಕೆಗೆ ಪ್ರೋತ್ಸಾಹಿಸಲಾಗಿರುತ್ತದೆ.
11. 2021-22 & 2022-23 ರಲ್ಲಿ ಕಲಿಕಾಚೇತರಿಕೆ ಕಾರ್ಯಕ್ರಮವನ್ನು ಅನಷ್ಠಾನಗೊಳಿಸಿ ಶಿಕ್ಷಕರಿಗೆ ಕೋವಿಡ್ ಸಮಯದಲ್ಲಿ ತರಬೇತಿ ನೀಡಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಒತ್ತು ನೀಡಲಾಗಿದೆ.

12. ರಾಜ್ಯದ ಸರ್ಕಾರಿ & ಅನುದಾನಿತ ಶಾಲೆಗಳಿಂದ ಸಾಧನೆ ಮಾಡಿದ ಶಿಕ್ಷಕರುಗಳಿಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಗುತ್ತಿದೆ. ಇದರಿಂದಾಗಿ ಶಿಕ್ಷಕರು ತಮ್ಮ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪರಿಣಾಮಕಾರಿ ಪಾಠ ಬೋಧನೆಗೆ ಶ್ರಮಿಸುವರು.
13. ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ಗುರ್ತಿಸಿ ಶಾಲಾ ನವೀಕರಣಕ್ಕಾಗಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ
14. ಪ್ರತಿ ವರ್ಷ ರಾಜ್ಯದಲ್ಲಿ 8 ಉತ್ತಮ ಶಾಲೆಯನ್ನು ಗುರ್ತಿಸಿ ಸ್ವಾಭಿಮಾನಿ ಶಾಲೆಗಳಾಗಿ ಆಯ್ಕೆ ಮಾಡಿ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.
15. ರಾಜ್ಯದ ಎಲ್ಲಾ ಶಾಲೆಗಳಿಗೆ ಸಿ.ಆರ್.ಪಿ ಬಿ.ಆರ್.ಪಿ. ಬಿ.ಆರ್.ಸಿ ಡಯಟ್ ಉಪನ್ಯಾಸಕರು ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಗಳು ಪ್ರತಿ ಮಾಹೆ ಸದರಿ ಶಾಲೆಗಳ ಭೇಟಿ ನೀಡುವುದರೊಂದಿಗೆ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಅನುಪಾಲನೆ ಮಾಡಲು ಸೂಚಿಸಲಾಗಿರುತ್ತದೆ
16. ಪಿ.ಆರ್.ಡಿ.ಎಫ್ ಯೋಜನೆಯಡಿ ಗ್ರಾಮಸಭೆ ನಡೆಸುವ ಮೂಲಕ ಮಕ್ಕಳ ದಾಖಲಾತಿ ಆಂದೋಲನವನ್ನು ಹಮ್ಮಿಕೊಂಡು ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮವಹಿಸುವುದು.
17. ಎನ್.ಟಿ.ಎಸ್.ಇ /ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ & ಎಂ.ಹೆಚ್.ಆರ್.ಡಿ ಮೂಲಕ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
18. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಪ್ರತಿ ಬ್ಲಾಕ್‌ನಲ್ಲಿ ನೋಡಲ್ ಅಧಿಕಾರಿಗಳ ನೇಮಿಸಿ ಪೋಷಕರ & ಮಕ್ಕಳ ಮನವೊಲಿಸಿ ಶಾಲೆಗೆ ಕರೆತರಲು ಕ್ರಮವಹಿಸಲಾಗುತ್ತಿದೆ.
19. 1446 ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ.
20. 2024-25ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈಗಾಗಲೇ ನಡೆಯುತ್ತಿರುವ ಕನ್ನಡ ಮತ್ತು ಇತರೆ ಮಾಧ್ಯಮದ ತರಗತಿಯ ಜೊತೆಗೆ 1792 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ದ್ವಿಭಾಷಾ ಮಾಧ್ಯಮ ಪ್ರಾರಂಭಿಸಲಾಗಿದೆ.
21. ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಶಾಲಾ ಲಭ್ಯತೆಯಿಲ್ಲದ ಪ್ರದೇಶಗಳಿಂದ ಸಮೀಪದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಸಾರಿಗೆ ಮತ್ತು ಬೆಂಗಾವಲು ಭತ್ಯೆಯನ್ನು ನೀಡಲಾಗುತ್ತಿದೆ.
22. ರಾಜ್ಯದಲ್ಲಿ ಒಟ್ಟು 285 ಕೆ.ಪಿ.ಎಸ್ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಒಂದೇ ಆವರಣದಲ್ಲಿರುವ ಪೂರ್ವ ಪ್ರಾಥಮಿಕ, ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ತರಗತಿಗಳನ್ನು ಒಂದು ಗೂಡಿಸಿ ಗುಣಾತ್ಮಕ ಶಿಕ್ಷಣ ನೀಡುವ ಸಲುವಾಗಿ ಕೆ.ಪಿ.ಎಸ್ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ವಿದ್ಯಾರ್ಥಿ ಕೇಂದ್ರಿತ, ಸಮುದಾಯಮುಖಿ ಮತ್ತು ಸಮುದಾಯ ಬೆಂಬಲಿತ ಶಾಲೆಗಳನ್ನಾಗಿಸಿ, ಉತ್ಕೃಷ್ಟತೆ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುವುದು.

23. ಕರ್ನಾಟಕ ರಾಜ್ಯದ 22 ಜಿಲ್ಲೆಗಳ 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಆದರ್ಶ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ.
24. ರಾಜ್ಯದ 129 ಸರ್ಕಾರಿ ಶಾಲೆಗಳಲ್ಲಿ ಕೇಂದ್ರ ಪುರಸ್ಕೃತ ಪಿ.ಎಂ.ಶ್ರೀ ಶಾಲೆಗಳನ್ನು ಪ್ರಾರಂಭಿಸಲಾಗಿದೆ.
25. ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು 66 ಕೆಜಿಬಿವಿ (ಟೈಪ್-1) ವಸತಿ ಶಾಲೆಗಳನ್ನು, 74 ಕೆಜಿಬಿವಿ (ಟೈಪ್-4) ವಸತಿ ನಿಲಯಗಳನ್ನು, 86 ಕರ್ನಾಟಕ ಕೆಜಿಬಿವಿ ವಸತಿ ನಿಲಯಗಳನ್ನುಹಾಗೂ ನಗರ ಪ್ರದೇಶದಲ್ಲಿ ಶಾಲಾ ವಂಚಿತ ಮಕ್ಕಳಿಗಾಗಿ 05 ನೇತಾಜಿ ಆವಾಸಿಯ ವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ.
26. ರಾಜ್ಯದ 375 ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ NSQF ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
27. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಚೇತನ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
28. ಜೂನ್ ಮತ್ತು ಜುಲೈ ತಿಂಗಳಿನಲ್ಲಿ ದಾಖಲಾತಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿರುತ್ತದೆ

**ಇಪಿ 105 ಯೋಸಕ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

ಅನುಬಂಧ-1

CLOSED SCHOOL INFORMATION

| S.L NO | TALUK | NAME OF THE SCHOOL | UDISE CODE | CLOSED YEAR |
|---|---|---|---|---|
| 1 | MADIKERI | G.L.P.SCHOOL AIVATHOKLU | 29250104905 | 2019 |
| 2 | VIRAJPET | G L P SCHOOL(U) PONNAMPET | 29250304706 | 2019 |
| 3 | MADIKERI | GHPS CHOOL KADAMAKALLU | 29250101701 | 2022 |
| 4 | MADIKERI | GLPS HULITALA | 29250106202 | 2022 |
| 5 | SOMAVARPET | GHPS MANAGALI | 29250204701 | 2022 |
| 6 | SOMAVARPET | GLPS DODDAKOLATHUR | 29250208501 | 2022 |
| 7 | SOMAVARPET | GLPS BILIGERI | 29250201401 | 2022 |
| 8 | SOMAVARPET | GLPS SAMPIGEDALU | 29250204901 | 2022 |
| 9 | SOMAVARPET | GHPS KOTHANALLI | 29250203001 | 2022 |
| 10 | SOMAVARPET | GLPS THAKERI | 29250201601 | 2022 |
| 11 | VIRAJPET | GLPS AMBATTI | 29250300405 | 2022 |
| 12 | MADIKERI | GLPS MARANDODA | 29250103302 | 2023 |
| 13 | SOMAVARPET | GHPS KUDLURCHETTALLI | 29250209801 | 2023 |
| 14 | SOMAVARPET | GHPS HARAGA | 29250202801 | 2023 |
| 15 | VIRAJPET | GLPS ARAMERI | 29250301601 | 2023 |
| 16 | MADIKERI | GHPS CHOOL NEERUKOLLI | 29250100201 | 2024 |
| 17 | MADIKERI | GLPS THAVURU | 29250104202 | 2024 |
| 18 | SOMAVARPET | GHPS(U) SHANIVARSANTHE | 29250206302 | 2024 |
| 19 | SOMAVARPET | GLPS NILUVAGLU | 29250204101 | 2024 |
| 20 | SOMAVARPET | GLPS KUDLUR | 29250204101 | 2024 |
| 21 | SOMAVARPET | GLPS NAGARALLI | 29250202902 | 2024 |